ಕ್ರಿ.ಮಿಸ್.65/2026
ಪಿ.ಡಬ್ಲ್ಯೂ 1

ದಿನಾಂಕ **29.06.2026** ರಂದು ಸಾಕ್ಷಿಯು ಹಾಜರಿದ್ದು ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ನಾನು ಸಲ್ಲಿಸಿದ ಪ್ರಮಾಣಪತ್ರವನ್ನು ನಾನು ಓದಿ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿಯು ನನ್ನದಾಗಿರುತ್ತದೆ. ಅದರಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತದೆ.

ಎದುರುದಾರರು ನೀಡಿದ ಅಲಭ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನನ್ನ ಆಧಾರ್ ಕಾರ್ಡಿನ ಯಥಾ ಪ್ರತಿಯನ್ನು ಹಾಜರುಪಡಿಸಿದ್ದು ಅದರ ಮೂಲ ಪ್ರತಿಯೊಂದಿಗೆ ಪರಿಶೀಲಿಸಿ ಯಥಾ ಪ್ರತಿಯನ್ನು ನಿಪಿ-2 ಎಂದು ಗುರುತಿಸಲಾಯಿತು. ನಮ್ಮ ಅಜ್ಜಿಯ ಮರಣದ ಬಗ್ಗೆ ದಿ.29-04-2026 ರ ಹೊಸ ದಿಗಂತ ದಿನ ಪತ್ರಿಕೆಯಲ್ಲಿ ಹೊರಡಿಸಿದ ಪತ್ರಿಕಾ ಪ್ರಕಟಣೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಮ್ಮ ಅಜ್ಜಿಯ ಮರಣದ ಬಗ್ಗೆ ದಿ. 03-05-2026 ರ ಇಂಡಿಯನ್ ಎಕ್ಸಪ್ರೆಸ್ ದಿನ ಪತ್ರಿಕೆಯಲ್ಲಿ ಹೊರಡಿಸಿದ ಪತ್ರಿಕಾ ಪ್ರಕಟಣೆಯನ್ನು ನಿಪಿ-4 ಎಂದು ಗುರುತಿಸಲಾಯಿತು.

**ಪ್ರತಿವಾದಿ ಏಕತರ್ಫಿಯಾದ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯ್ತು.**

ನನ್ನ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾ ದಂ.
ಮೂಡಬಿದಿರೆ